# ಬೆಳಕಿನಿಂದ ಬೆಳಕಿಗೆ

ಅನು: ಡಾ. ಕೆ. ಅನಂತರಾಮು



('ಪ್ರೇರಕ ಪ್ರಸಂಗ' ಎಂಬ ಹಿಂದೀ ಗ್ರಂಥದಿಂದ ಆಯ್ದುದು)

ಭಗವಾನ್ ಬುದ್ಧದೇವನು ಜೇತವನದಲ್ಲಿ ಪ್ರವಚನ ನೀಡುತ್ತಿದ್ದಾಗ, ಶ್ರೀಸಾಮಾನ್ಯರಲ್ಲದೆ ಅಲ್ಲಿ ಹಲವು ಗಣ್ಯರೂ ನೆರೆದು ಅರ್ತಿಯಿಂದ ಆಲಿಸುತ್ತಿದ್ದರು. ಒಂದು ದಿನ ಹೀಗೆಯೇ ಪ್ರವಚನ ಮುಗಿದ ಬಳಿಕ ಎಲ್ಲರೂ ಸ್ವಾಮಿಗೆ ಅಡ್ಡಬಿದ್ದು ತಂತಮ್ಮ ದಾರಿ ಹಿಡಿದು ಹೊರಟುಹೋದರು. ನಂದಪುತ್ರನೆಂಬ ದೊರೆಯು ಮಾತ್ರ ಅಲುಗಾಡದೆ ಅಂದು ಅಲ್ಲಿಯೇ ಕುಳಿತಿದ್ದನು. ಅದನ್ನು ಕಂಡ ಬುದ್ಧದೇವನು, ''ಏನು ವಿಚಾರ ನಂದಪುತ್ರ, ನನ್ನಿಂದೇನಾಗಬೇಕು'' ಎಂದು ತಾನೇ ಕೇಳಿದನು. ''ಕತ್ತಲೆಯಿಂದ ಕತ್ತಲೆಗೆ ಹೋಗುವವರು, ಕತ್ತಲೆಯಿಂದ ಬೆಳಕಿಗೆ ಹೋಗುವವರು, ಬೆಳಕಿನಿಂದ ಕತ್ತಲೆಗೆ ಹೋಗುವವರು, ಬೆಳಕಿನಿಂದ ಬೆಳಕಿಗೆ ಹೋಗುವವರು ಎಂದು ಲೋಕದಲ್ಲಿ ನಾಲ್ಕು ವಿಧದ ಜನರಿದ್ದಾರೆ ಎಂದು ಈಗ ನೀನು ಹೇಳಿದೆಯಲ್ಲ ; ದಯಮಾಡಿ ಅದನ್ನು ಸ್ವಲ್ಪ ವಿವರಿಸಿ ಹೇಳು ತಂದೆ'' ಎಂದು ನಂದಪುತ್ರನು ಜಿಜ್ಞಾಸುವಾಗಿ ಬೇಡಿದನು.

''ಅಜ್ಞಾನವೆಂಬ ಕತ್ತಲೆಯಲ್ಲಿರುತ್ತ, ಬದುಕಿನ ಪರ್ಯಂತ ದುಷ್ಕರ್ಮಗಳನ್ನು ಮಾಡುತ್ತ, ಕೊಲೆ ಹಿಂಸೆ ಲೂಟಿ ಕಳ್ಳತನ ವಂಚನೆ ಮುಂತಾದವುಗಳಲ್ಲೇ ಯಾರು ತಮ್ಮ ಬದುಕೆನ್ನಲ್ಲ ಹಾಳು ಮಾಡಿಕೊಂಡುಬಿಡುತ್ತಾರೋ – ಅಂತಹವರು ಕತ್ತಲೆಯಿಂದ ಕತ್ತಲೆಗೆ ಹೋಗುವವರಾಗಿದ್ದರೆ.

ಅಜ್ಞಾನವೆಂಬ ಕತ್ತಲೆಯಲ್ಲಿದ್ದರೂ, ಕೊಲೆ ಹಿಂಸೆ ದರೋಡೆ ಮುಂತಾದುವುದಗಳ ಪರಿಸರದಲ್ಲಿದ್ದರೂ, ಹೇಗೋ ಜ್ಞಾನದ ಸ್ಪರ್ಶದಿಂದ ಎಚ್ಚೆತ್ತುಕೊಂಡು, ಆ ಕತ್ತಲೆಯಿಂದ ಹೊರಬಂದು, ಸತ್ಕರ್ಮಗಳಲ್ಲಿ ನಿರತರಾಗಿ, ಯಾರು ಒಳ್ಳೆಯ ಜೀವನ ನಡೆಸುತ್ತಾರೋ – ಅವರು ಕತ್ತಲೆಯಿಂದ ಬೆಳಕಿನೆಡೆಗೆ ಹೋಗುವವರಾಗಿದ್ದಾರೆ.

''ಜ್ಞಾನವೆಂಬ ಬೆಳಕಿನ ವಾತಾವರಣದಲ್ಲಿಯೇ ಇದ್ದರೂ, ಸತ್ಕರ್ಮಗಳಲ್ಲಿ ನಿರತರಾಗಬಹುದಾಗಿದ್ದರೂ, ಸದಾಚಾರಿಗಳಾಗಿ ಜೀವನ ನಡೆಸಬಹುದಾಗಿದ್ದರೂ, ಅವುಗಳನ್ನು ಸದುಪಯೋಗ ಮಾಡಿಕೊಳ್ಳದೆ, ಯಾರು ದುರಾಚಾರಿಗಳಾಗಿಯೇ ತಮ್ಮ ಬದುಕನ್ನು ಕಳೆದುಬಿಡುತ್ತಾರೋ – ಅಂತಹವರು ಬೆಳಕಿನಿಂದ ಕತ್ತಲೆಯ ಕಡೆಗೆ ಹೋಗುವವರಾಗಿದ್ದಾರೆ.

''ಜ್ಞಾನವೆಂಬ ಬೆಳಕಿನ ವಾತಾವರಣದಲ್ಲಿರುತ್ತ, ಅನವರತವೂ ಸದ್ವಿಚಾರ ಚಿಂತನೆಗೆ, ಸತ್ಸಂಗಕ್ಕೆ, ಸತ್ಕರ್ಮ ಸದಾಚಾರಗಳಿಗೆ ಯಾರು ತಮ್ಮ ಬದುಕನ್ನೆಲ್ಲ ಮೀಸಲಾಗಿಟ್ಟು ಸಾಧು ಜೀವನ ನಡೆಸುತ್ತಾರೋ – ಅಂತಹವರು ಬೆಳಕಿನಿಂದ ಬೆಳಕಿನೆಡೆಗೆ ಹೋಗುವವರಾಗಿದ್ದಾರೆ'' ಎಂದು ಬುದ್ಧದೇವನು ವಿನಂತಿಸಿದನು. ಅದನ್ನು ಶ್ರವಣಮಾಡಿದ ನಂದಪುತ್ರನು, ''ನಾನು ಧನ್ಯನಾದೆ ತಂದೆ, ಬದುಕಿನ ಮಂಗಳದ ಹಾದಿಯನ್ನು ಕಂಡುಕೊಂಡೆ'' ಎಂದು ನಮಸ್ಕರಿಸಿ ನಡೆದನು.

ಕಣ್ಣಿಟ್ಟು ನೋಡಿದರೆ ನಮಗೂ ಲೋಕದಲ್ಲಿ ಬುದ್ಧದೇವನು ವಿವರಿಸಿದ ನಾಲ್ಕು ರೀತಿಯ ಮನುಷ್ಯರು ಕಾಣಸಿಗುತ್ತಾರೆ. ನಾವು ನಾಲ್ಕನೆಯ ಗುಂಪಿನ ಪ್ರತಿನಿಧಿಗಳಾಗಬೇಕಾಗಿದೆ. ಬೆಳಕಿನಲ್ಲೇ ಹುಟ್ಟಿದ್ದೇವೆ, ಬೆಳಕಿನಲ್ಲಿಯೇ ಬಾಳುತ್ತಿದ್ದೇವೆ, ಕೊನೆಗೆ ಬೆಳಕನ್ನೇ ಸೇರಿಹೋಗುತ್ತೇವೆ ಎಂಬ ನಿಶ್ಚಯವನ್ನು ತಾಳಬೇಕಾಗಿದೆ. ✽